ಓ.ಎಸ್.ನಂ.48-2012
ಡಿ.ಡಬ್ಲ್ಯು-೧

ದಿ: 25.10.2025 ರಂದು 3ನೇ ಪ್ರತಿವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ ಪರವಾಗಿ ಶ್ರೀಯುತ ಡಿ.ವಿ.ಎಸ್. ವಕೀಲರಿಂದ :**

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಿ: 18.12.1997 ರಂದು ಮುತ್ಯಾಲಮ್ಮ ಮತ್ತು ಮುತ್ಯಾಲಪ್ಪರವರು ೩ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.3 ಎಂದು, ದಿ: 17.06.1985 ರಂದು ಮುತ್ಯಾಲಮ್ಮರವರು ನೀಡಿದ ಮರುಮಂಜೂರಾತಿ ಅರ್ಜಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.4 ಎಂದು, ತಹಶೀಲ್ದಾರ್ ನ್ಯಾಯಾಲಯದ ಪ್ರಕರಣ ಸಂಖ್ಯೆ ಹೆಚ್.ಓ.ಎ 44/81-82ರ ನಡವಳಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.5 ಎಂದು, ತಹಶೀಲ್ದಾರ್ ನ್ಯಾಯಾಲಯದ ಪ್ರಕರಣ ಸಂಖ್ಯೆ ಹೆಚ್.ಓ.ಎ 44/81-82ರ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.6 ಎಂದು, ಹುಲ್ಲೂರು ಅಮಾನಿಕೆರೆ ಗ್ರಾಮದ ಸರ್ವೆ ನಂ.30 ವಿಸ್ತೀರ್ಣ 4.22 ಎಕರೆ ಜಮೀನಿನ 1996-97 ನೇ ಸಾಲಿನ ಕೈ ಬರಹ ಪಹಣಿ ಪತ್ರಿಕೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.7 ಎಂದು, ಎಂ.ಆರ್.ಸಂಖ್ಯೆ 13/97-98ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.8 ಎಂದು, ಹುಲ್ಲೂರು ಅಮಾನಿಕೆರೆ ಗ್ರಾಮದ ಸರ್ವೆ ನಂ.30 ಹಿಸ್ಸಾ * ವಿಸ್ತೀರ್ಣ 4.22 ಎಕರೆ ಜಮೀನಿನ 2008-09 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ನಿ.ಡಿ.9 ಎಂದು, ಹುಲ್ಲೂರು ಅಮಾನಿಕೆರೆ ಗ್ರಾಮದ ಸರ್ವೆ ನಂ.30 ಹಿಸ್ಸಾ 2 ವಿಸ್ತೀರ್ಣ 1.12.12 ಎಕರೆ ಜಮೀನಿನ 2009-10 ರಿಂದ 2025-26 ನೇ ಸಾಲಿನವರೆಗಿನ 16 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಡಿ.10 ರಿಂದ 26 ಎಂದು, 5 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಡಿ.27 ಎಂದು, ನಿ.ಡಿ.27 ಛಾಯಾಚಿತ್ರಗಳ ಸಿ.ಡಿ.ಯನ್ನು ಹಾಜರುಪಡಿಸಿದ್ದು ನಿ.ಡಿ.28 ಎಂದು, ನಿ.ಡಿ.27 ಛಾಯಾಚಿತ್ರಗಳ ಎರಡು ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಡಿ.29 ಎಂದು, ಹುಲ್ಲೂರು ಅಮಾನಿಕೆರೆ ಗ್ರಾಮದ ಸರ್ವೆ ನಂ.30/2 ಮತ್ತು 31/3 ಜಮೀನಿನ ಕಂದಾಯ ರಸೀದಿಯನ್ನು ಹಾಜರುಪಡಿಸಿದ್ದು ನಿ.ಡಿ.30 ಎಂದು, ಹುಲ್ಲೂರು ಅಮಾನಿಕೆರೆ ಗ್ರಾಮದ ಸರ್ವೆ ನಂ.30/2 ಮತ್ತು 31/3 ಜಮೀನಿನ ಪಟ್ಟಾ ಪುಸ್ತಕವನ್ನು ಹಾಜರುಪಡಿಸಿದ್ದು ನಿ.ಡಿ.31 ಎಂದು, ದಿ: 12.12.1995 ರ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.32 ಎಂದು, ದಿ: 21.1.1999 ರಂದು ಮುತ್ಯಾಲಮ್ಮರವರು ಆಂಜಿನಮ್ಮ ರವರಿಗೆ ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.33 ಎಂದು, ದಿ: 14.04.2006 ರಂದು ಮುತ್ಯಾಲಮ್ಮರವರು ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.34 ಎಂದು, ದಿ: 01.04.1980 ರಿಂದ 31.03.2004ನೇ ಸಾಲಿನವರೆಗಿನ ಹುಲ್ಲೂರು ಅಮಾನಿಕೆರೆ ಗ್ರಾಮದ ಸರ್ವೆ ನಂ.77 ಜಮೀನಿನ ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿ.ಡಿ.35 ಎಂದು, ದಿ: 30.09.2004 ರಂದು ಮುತ್ಯಾಲಮ್ಮ ಮತ್ತು ಇತರರು ವೆಂಕಟೇಶ್ ರವರಿಗೆ ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.36 ಎಂದು, ಮೂಲ ದಾವೆ ಸಂಖ್ಯೆ 46-12 ರ ನಡವಳಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.37 ಎಂದು, ಮೂಲ ದಾವೆ ಸಂಖ್ಯೆ 46-12 ರ ವಾದ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.38 ಎಂದು, ಮೂಲ ದಾವೆ ಸಂಖ್ಯೆ 46-12 ರ ತಿದ್ದುಪಡಿ ವಾದ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.39 ಎಂದು, ಮೂಲ ದಾವೆ ಸಂಖ್ಯೆ 46-12 ರ ೧ನೇ ಮಧ್ಯಂತರ ಅರ್ಜಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.40 ಎಂದು, ಮೂಲ ದಾವೆ ಸಂಖ್ಯೆ 46-12 ರಲ್ಲಿ ಸಲ್ಲಿಸಿದ ಪಕ್ಷಗಾರರ ಸೇರ್ಪಡೆ ಅರ್ಜಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.41 ಎಂದು, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63 ರಡಿಯಲ್ಲಿನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿ.ಡಿ.42 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥನೆ.

**ಪಾಟೀ ಸವಾಲು: ವಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

Case called out.
Defendant no.3 is present.
The counsel for the defendant no.3 files application U/o. 8 Rule 1(a) of CPC., along with list of documents.
On the other hand, the counsel for the plaintiffs submits that application may be allowed on cost.
Heard,
Perused the application and reasons assigned thereon. The reason assigned in the application for delay in producing the documents is justified. Hence, application is allowed on cost of Rs.200/-.
Defendant no.3 files affidavit in lieu of examination in chief and examined as D.W.1 and got marked Ex.D.3 to Ex.D.42.
For cross examination of D.W.1 by 30.10.2025.

**Prl.C.J. and JMFC, Hoskote.**